# ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) ಅಧಿನಿಯಮ, 1987

## ಪ್ರಕರಣಗಳ ಕ್ರಮಪಟ್ಟಿ

**ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ:**

**ಪ್ರಕರಣಗಳು:**


1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.

2. ಪರಿಭಾಷೆಗಳು.

3. ಪಕ್ಷಾಂತರ ಆಧಾರದ ಮೇಲೆ ಅನರ್ಹತೆ.

3ಎ. ಪಕ್ಷಾಂತರದ ಕಾರಣದಿಂದ ಉಂಟಾಗುವ ಅನರ್ಹತೆಯು ಪಕ್ಷವು ಒಡೆದ ಸಂದರ್ಭದಲ್ಲಿ ಅನ್ವಯವಾಗಬಾರದು.

3ಬಿ. ಪಕ್ಷಾಂತರ ಕಾರಣದಿಂದಾಗಿ ಉಂಟಾಗುವ ಅನರ್ಹತೆಯು ವಿಲೀನತೆಯ ಸಂದರ್ಭದಲ್ಲಿ ಅನ್ವಯವಾಗಬಾರದು.

4. ಪಕ್ಷಾಂತರದ ಆಧಾರದ ಮೆಲೆ ಅನರ್ಹತೆಗೆ ಸಂಬಂಧಪಟ್ಟ ಪ್ರಶ್ನೆಯ ಬಗ್ಗೆ ತೀರ್ಮಾನ.

5. 1964ರ ಕರ್ನಾಟಕ ಅಧಿನಿಯಮ 22ಕ್ಕೆ ತಿದ್ದುಪಡಿ.

6. 1977ರ ಕರ್ನಾಟಕ ಅಧಿನಿಯಮ 14ಕ್ಕೆ ತಿದ್ದುಪಡಿ.

7. 1985ರ ಕರ್ನಾಟಕ ಅಧಿನಿಯಮ 20ಕ್ಕೆ ತಿದ್ದುಪಡಿ.

8. ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯ ಮೆಲೆ ಪ್ರತಿಷೇಧ.

9. ನಿಯಮಗಳ ರಚನಾಧಿಕಾರ.

10. ನಿರಸನ ಮತ್ತು ಉಳಿಸುವಿಕೆಗಳು.


* * * *

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

I

**1987ರ ಅಧಿನಿಯಮ ಸಂಖ್ಯೆ 20.–** ಜಿಲ್ಲಾ ಪರಿಷತ್ತುಗಳು ಮತ್ತು ಮಂಡಲ ಪಂಚಾಯಿತಿಗಳ ಸದಸ್ಯರು, ಮುನಿಸಿಪಲ್ ಕಾರ್ಪೋರೇಷನ್ನುಗಳು ಮತ್ತು ಸಿಟಿ ಮತ್ತು ಟೌನ್ ಮುನಿಸಿಪಲ್ ಕೌನ್ಸಿಲುಗಳ ಕೌನ್ಸಿಲರುಗಳನ್ನು ಯಾವ ರಾಜಕೀಯ ಪಕ್ಷಗಳಿಂದ ಅವರನ್ನು ಅಭ್ಯರ್ಥಿಗಳಾಗಿ ನಿಲ್ಲಿಸಲಾಗಿತ್ತೋ, ಅವುಗಳಿಂದ ಪಕ್ಷಾಂತರ ಮಾಡುವುದನ್ನು ನಿಷೇಧಿಸುವುದಕ್ಕಾಗಿ ಉಪಬಂಧ ಕಲ್ಪಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿ ಮತ್ತು ನ್ಯಾಯ ಪಂಚಾಯಿತಿಗಳ ಅಧಿನಿಯಮ, 1983 (1985 ರ ಕರ್ನಾಟಕ ಅಧಿನಿಯಮ ಸಂಖ್ಯೆ 20), ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ನುಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14) ಮತ್ತು ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22) ಇವುಗಳಲ್ಲಿ ಕೆಲವು ಪರಿಣಾಮಿಕ ಬದಲಾವಣೆಗಳನ್ನು ಮಾಡಲು ಸಹ ಈ ಅವಕಾಶವನ್ನು ಉಪಯೋಗಿಸಿಕೊಳ್ಳಲಾಗಿದೆ.

ಈ ವಿಚಾರದಲ್ಲಿ ಒಂದು ಅಧ್ಯಾದೇಶವನ್ನು ಹೊರಡಿಸಲಾಯಿತು, ಸದರಿ ವಿಧೇಯಕವು ಅಧ್ಯಾದೇಶವನ್ನು ಬದಲಾಯಿಸುವುದಾಗಿದೆ.

ಆದ್ದರಿಂದ ಈ ವಿಧೇಯಕ.

(ದಿನಾಂಕ 04-02-1987ರ ಕರ್ನಾಟಕ ರಾಜ್ಯಪತ್ರ (ವಿಶೇಷ ಪತ್ರಿಕೆ) ಭಾಗ-4 ಸೆಕ್ಷನ್ -2ಎ, ಸಂಖ್ಯೆ 93 ರಲ್ಲಿ ಪ್ರಕಟಿತ)

II

**1995ರ ಅಧಿನಿಯಮ ಸಂಖ್ಯೆ 13 :** ಕರ್ನಾಟಕ ಸ್ಥಳೀಯ ಪ್ರಾಧಿಕಾಗಳು (ಪಕ್ಷಾಂತರ ನಿಷೇಧ) ಅಧಿನಿಯಮ, 1987ನ್ನು ಈ ಮುಂದಿನ ಉದ್ದೇಶಗಳಿಗಾಗಿ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಯಿತು.

(i) ಉದ್ದೇಶಪೂರ್ವಕವಾಗಿ ಸಭೆಗೆ ಗೈರುಹಾಜರಾಗುವ ಕಾರಣಕ್ಕಾಗಿ ಅನರ್ಹಗೊಳಿಸಲು ಉಪಬಂಧ ಕಲ್ಪಿಸುವುದು ;

(ii) ಒಂದು ರಾಜಕೀಯ ಪಕ್ಷದಿಂದ ನಿಲ್ಲಿಸಲಾಗಿದ್ದ ಅಭ್ಯರ್ಥಿಯ ಹೊರತು ಅನ್ಯಥಾ ಕೌನ್ಸಿಲರ್ ಅಥವಾ ಸದಸ್ಯನಾಗಿ ಚುನಾಯಿತನಾದ ವ್ಯಕ್ತಿಗೆ ಒಂದು ಗೊತ್ತುಪಡಿಸಿದ ಅವಧಿಯೊಳಗೆ ಯಾವುದೇ ರಾಜಕೀಯ ಪಕ್ಷಕ್ಕೆ ಸೇರಲು ಸಾಧ್ಯವಾಗುವಂತೆ ಮಾಡುವುದು ;

(iii) ಪಕ್ಷ ಒಡೆಯುವುದು ಅಥವಾ ವಿಲೀನಗೊಳ್ಳುವ ಸಂದರ್ಭದಲ್ಲಿ ಪಕ್ಷಾಂತರದ ಕಾರಣದ ಮೇಲಿನ ಅನರ್ಹತೆಯು ಅನ್ವಯಿಸದಿರುವ ಬಗ್ಗೆ ಉಪಬಂಧ ಕಲ್ಪಿಸುವುದು ;

(iv) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಬದಲಾಗಿ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರನ್ನು ಜಿಲ್ಲಾ ಪರಿಷತ್ತಿನ ಸಂದರ್ಭದಲ್ಲಿ ದೂರನ್ನು ವಿಚಾರಣೆ ಮಾಡುವ ಸಕ್ಷಮ ಪ್ರಾಧಿಕಾರಿಯನ್ನಾಗಿ ಮಾಡುವುದು ;

(v) ದೂರನ್ನು ವಿಚಾರಣೆ ಮಾಡಲು ಇರುವ ಕಾಲಮಿತಿಯನ್ನು ಏಳು ದಿನಗಳಿಂದ ಮೂವತ್ತು ದಿನಗಳವರೆಗೆ ವಿಸ್ತರಿಸುವುದು.

ಕೆಲವು ಆನುಷಂಗಿಕ ತಿದ್ದುಪಡಿಗಳನ್ನು ಮಾಡಲು ಸಹ ಅವಕಾಶವನ್ನು ಬಳಸಿಕೊಳ್ಳಲಾಯಿತು.

ಆದ್ದರಿಂದ ವಿಧೇಯಕ.

(ಕರ್ನಾಟಕ ವಿಧಾನಮಂಡಲದ 1995ರ ವಿಧೇಯಕ ಸಂಖ್ಯೆ 9ರಲ್ಲಿದ್ದಂತೆ)

## III

**1995ರ ಅಧಿನಿಯಮ ಸಂಖ್ಯೆ 19:** ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಯ ಸಂದರ್ಭದಲ್ಲಿ ಪಕ್ಷಾಂತರದ ಆಧಾರದ ಮೇಲೆ ಅನರ್ಹತೆಯ ಪ್ರಶ್ನೆಯನ್ನು ನಿರ್ಧರಿಸಲು ರಾಜ್ಯ ಚುನಾವಣಾ ಆಯೋಗಕ್ಕೆ ಉಪಬಂಧ ಕಲ್ಪಿಸುವುದಕ್ಕಾಗಿ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) ಅಧಿನಿಯಮ, 1987ನ್ನು ತಿದ್ದುಪಡಿ ಮಾಡುವುದು ಅಗತ್ಯವೆಂದು ಭಾವಿಸಲಾಗಿದೆ.

ವಿಷಯವು ತುರ್ತು ಸ್ವರೂಪದ್ದಾದ್ದರಿಂದ ಮತ್ತು ಉಭಯ ಸದನಗಳೂ ಅಧಿವೇಶನದಲ್ಲಿಲ್ಲದಿದ್ದುದರಿಂದ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) (ತಿದ್ದುಪಡಿ) ಅಧ್ಯಾದೇಶ, 1995ನ್ನು ಪ್ರಖ್ಯಾಪಿಸಲಾಯಿತು.

ಆದುದರಿಂದ ಈ ವಿಧೇಯಕ.

(ಕರ್ನಾಟಕ ವಿಧಾನ ಮಂಡಲದ 1995ರ ವಿಧೇಯಕ ಸಂಖ್ಯೆ 30ರಲ್ಲಿದ್ದಂತೆ)

## IV

**2010ರ ಅಧಿನಿಯಮ ಸಂಖ್ಯೆ 17.–** ವಿಭಾಗೀಯ ಕಮೀಷನರ್ ಎಂಬ ಪದನಾಮಕ್ಕೆ, ಪ್ರಾದೇಶಿಕ ಕಮೀಷನರ್ ಎಂದು ಪದನಾಮ ನೀಡಲಾಗಿದೆ. ಆದ್ದರಿಂದ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) ಅಧಿನಿಯಮ, 1987ರ ಅಡಿಯಲ್ಲಿ ಮುನಿಸಿಪಲ್ ಕಾರ್ಪೊರೇಷನ್‌ನ ಸದಸ್ಯರು, ಅವರಿಗೆ ಸಲ್ಲಿಸಿದ ಪಕ್ಷಾಂತರಕ್ಕೆ ಸಂಬಂಧಪಟ್ಟ ದೂರುಗಳನ್ನು ವಿಲೆ ಮಾಡಲು ಪ್ರಾದೇಶಿಕ ಕಮೀಷನರಿಗೆ ಅಧಿಕಾರವನ್ನು ನೀಡುವುದಕ್ಕಾಗಿ ಈ ಅಧಿನಿಯಮವನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2010ರ ವಿಧಾನ ಸಭೆಯ ವಿಧೇಯಕ ಸಂಖ್ಯೆ 11, ಕಡತ ಸಂಖ್ಯೆ ಸಂವ್ಯಶಾಇ 7 ಶಾಸನ 2010)

(ಭಾರತದ ಸಂವಿಧಾನದ ಏಳನೆಯ ಅನುಸೂಚಿಯ ಎರಡನೇ ಪಟ್ಟಿಯ 5ನೇ ನಮೂದನೆಯ ಅಡಿಯಲ್ಲಿ ಬರುತ್ತೆ.)

## V

**2013ರ ತಿದ್ದುಪಡಿ ಅಧಿನಿಯಮ ಸಂಖ್ಯೆ 5.–** ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) ಅಧಿನಿಯಮ, 1987 ಸದರಿ ಅಧಿನಿಯಮವನ್ನು 4ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಯವರು ಒಂದು ದೂರನ್ನು ಉಲ್ಲೇಖಿಸಿರುವಲ್ಲಿ, ಪಕ್ಷಾಂತರದ ಕಾರಣದ ಮೇಲೆ, ಅನರ್ಹತೆಯ ಪ್ರಶ್ನೆಯ ಮೇಲೆ ತೀರ್ಮಾನವನ್ನು ಕೈಗೊಳ್ಳಲು ಮಿತಿಯ ವಿಸ್ತರಣೆಗೆ ಉಪಬಂಧ ಕಲ್ಪಿಸಲು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2012ರ ವಿಧಾನಸಭೆಯ ವಿಧೇಯಕ ಸಂಖ್ಯೆ:41, ಕಡತ ಸಂಖ್ಯೆ:ಸಂವ್ಯಶಾಇ 46 ಶಾಸನ 2012)

(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 5ನೆಯ ನಮೂದನೆಯಡಿಯಲ್ಲಿ ಬರುತ್ತದೆ.)

– – –

# 1987ರ ಕರ್ನಾಟಕ ಅಧಿನಿಯಮ ಸಂಖ್ಯೆ 20

( 1987 ಮೇ, 5ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ.)

# ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) ಅಧಿನಿಯಮ, 1987

(1987 ರ ಮೇ 2ನೇ ದಿನಾಂಕದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಲಾಗಿದೆ) (1995ರ ಅಧಿನಿಯಮ ಸಂಖ್ಯೆ 13 ಮತ್ತು 19 ಹಾಗೂ 2010ರ 17, 2013ರ 05ರ ಮೂಲಕ ತಿದ್ದುಪಡಿಯಾದಂತೆ)

**ಮುನಿಸಿಪಲ್ ಕಾರ್ಪೊರೇಷನ್ನುಗಳು ಮತ್ತು [1][ಮುನಿಸಿಪಲ್ ಕೌನ್ಸಿಲ್‌ಗಳ ಮತ್ತು ಟೌನ್ ಪಂಚಾಯಿತಿಗಳ ಕೌನ್ಸಿಲರುಗಳು ಮತ್ತು ಜಿಲ್ಲಾ ಪಂಚಾಯಿತಿಗಳು ಮತ್ತು ತಾಲ್ಲೂಕು ಪಂಚಾಯಿತಿಗಳ ಸದಸ್ಯರನ್ನು][1], ಯಾವ ರಾಜಕೀಯ ಪಕ್ಷಗಳಿಂದ ಅವರನ್ನು ಅಭ್ಯರ್ಥಿಗಳನ್ನಾಗಿ ನಿಲ್ಲಿಸಲಾಗಿತ್ತೋ ಆ ಪಕ್ಷಗಳಿಂದ ಪಕ್ಷಾಂತರ ಮಾಡುವುದನ್ನು ನಿಷೇಧಿಸುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳಿಗಾಗಿ ಒಂದು ಅಧಿನಿಯಮ.**

ಚುನಾವಣೆಯಲ್ಲಿ ಯಾವ ರಾಜಕೀಯ ಪಕ್ಷದಿಂದ ಅವನನ್ನು ಅಭ್ಯರ್ಥಿಯಾಗಿ ನಿಲ್ಲಿಸಲಾಗಿತ್ತೋ ಆ ರಾಜಕೀಯ ಪಕ್ಷದಿಂದ ಮುನಿಸಿಪಲ್ ಕಾರ್ಪೊರೇಷನ್, [1][ ಮುನಿಸಿಪಲ್ ಕೌನ್ಸಿಲ್‌ಗಳು ಮತ್ತು ಟೌನ್ ಪಂಚಾಯಿತಿಗಳ ಯಾವೊಬ್ಬ ಕೌನ್ಸಿಲರು ಮತ್ತು ಜಿಲ್ಲಾ ಪಂಚಾಯಿತಿಗಳ ಮತ್ತು ತಾಲ್ಲೂಕು ಪಂಚಾಯಿತಿಯ ಯಾವೊಬ್ಬ ಸದಸ್ಯನು][1] ಪಕ್ಷಾಂತರ ಹೊಂದುವುದನ್ನು ಷೇಧಿಸುವುದು ಅವಶ್ಯಕ ಮತ್ತು ಯುಕ್ತವೆಂದು ಪರಿಗಣಿಸಿರುವುದರಿಂದ ;

1. 1995ರ ಅಧಿನಿಯಮ ಸಂಖ್ಯೆ: 13ರ ಮೂಲಕ ದಿನಾಂಕ:03.05.1995 ರಿಂದ ಪ್ರತಿಯೋಜಿಸಲಾಗಿದೆ.

ಇದು, ಭಾರತ ಗಣರಾಜ್ಯದ ಮೂವತ್ತೆಂಟನೆಯ ವರ್ಷದಲ್ಲಿ ವ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) ಅಧಿನಿಯಮ, 1987 ಎಂದು ಕರೆಯತಕ್ಕದ್ದು.

(2) ಇದು 1986ರ ಡಿಸೆಂಬರ್ ಇಪ್ಪತ್ತೊಂಬತ್ತನೇ ದಿನಾಂಕದಂದು ಜಾರಿಯಲ್ಲಿ ಬಂದಿರುವುದಾಗಿ ಭಾವಿಸತಕ್ಕದ್ದು.

**2. ಪರಿಭಾಷೆಗಳು.**- ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯ ಪಡಿಸಿದ ಹೊರತು,-

(i) "ಕೌನ್ಸಿಲರ್" ಎಂದರೆ ಸಂದರ್ಭಾನುಸಾರ, ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್‌ಗಳ ಅಧಿನಿಯಮ, 1976 ಅಥವಾ ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ, 1964ರ ಅಡಿಯಲ್ಲಿ [1][ಚುನಾಯಿತನಾದ ಟೌನ್ ಪಂಚಾಯಿತಿಯ][1], ಮುನಿಸಿಪಲ್ ಕಾರ್ಪೊರೇಷನ್ ಅಥವಾ ಮುನಿಸಿಪಲ್ ಕೌನ್ಸಿಲ್‌ನ ಕೌನ್ಸಿಲರು;

1[(ii) ಕ್ರಮವಾಗಿ "ತಾಲ್ಲೂಕು ಪಂಚಾಯಿತಿ" ಮತ್ತು "ಜಿಲ್ಲಾ ಪಂಚಾಯಿತಿ" ಎಂದರೆ, ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ಅಡಿ ಸ್ಥಾಪಿಸಲಾದ "ತಾಲ್ಲೂಕು ಪಂಚಾಯಿತಿ" ಮತ್ತು "ಜಿಲ್ಲಾ ಪಂಚಾಯಿತಿ" ;

(iii) "ಸದಸ್ಯ" ಎಂದರೆ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ, 1993ರ ಅಡಿ ಚುನಾಯಿತನಾದ ಜಿಲ್ಲಾ ಪಂಚಾಯಿತಿ ಅಥವಾ ತಾಲ್ಲೂಕು ಪಂಚಾಯಿತಿಯ ಸದಸ್ಯ; ][1]

1. 1995ರ ಅಧಿನಿಯಮ ಸಂಖ್ಯೆ: 13ರ ಮೂಲಕ ದಿನಾಂಕ:03.05.1995 ರಿಂದ ಪ್ರತಿಯೋಜಿಸಲಾಗಿದೆ.

(iv) "ಮುನಿಸಿಪಲ್ ಕಾರ್ಪೊರೇಷನ್" ಎಂದರೆ, ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್‌ಗಳ ಅಧಿನಿಯಮ, 1976ರ ಅಡಿಯಲ್ಲಿ ಸ್ಥಾಪಿತವಾದ ಒಂದು ಮುನಿಸಿಪಲ್ ಕಾರ್ಪೊರೇಷನ್ ;

(v) "ಮುನಿಸಿಪಲ್ ಕೌನ್ಸಿಲ್ " ಎಂದರೆ, ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ, 1964ರ ಅಡಿಯಲ್ಲಿ ಸ್ಥಾಪಿತವಾದ ಒಂದು ನಗರ ಅಥವಾ ಪಟ್ಟಣ ಮುನಿಸಿಪಲ್ ಕೌನ್ಸಿಲ್ ;

(vi) ಕೌನ್ಸಿಲರು ಅಥವಾ ಸದಸ್ಯನ ಸಂಬಂಧದಲ್ಲಿ "ರಾಜಕೀಯ ಪಕ್ಷ" ಎಂದರೆ, ಚುನಾವಣಾ ಚಿಹ್ನೆಗಳ (ಮೀಸಲಾತಿ ಮತ್ತು ಹಂಚಿಕೆ) ಆದೇಶ, 1968ರ ಅಡಿಯಲ್ಲಿ ಒಂದು ರಾಷ್ಟ್ರೀಯ ಪಕ್ಷ ಅಥವಾ ಕರ್ನಾಟಕ ರಾಜ್ಯದಲ್ಲಿಯ ಒಂದು ರಾಜ್ಯ ಪಕ್ಷವೆಂದು ಭಾರತ ಚುನಾವಣಾ ಆಯೋಗದಿಂದ ಮಾನ್ಯತೆ ಪಡೆದ ಮತ್ತು 3ನೇ ಪ್ರಕರಣದ (1) ನೇ ಉಪ-ಪ್ರಕರಣದ ಉದ್ದೇಶಕ್ಕಾಗಿ ಅವನು ಸೇರಿದ ಒಂದು ರಾಜಕೀಯ ಪಕ್ಷ.

[1][(vii) "ಟೌನ್ ಪಂಚಾಯಿತಿ" ಎಂದರೆ, ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ರ ಅಡಿ ಸ್ಥಾಪಿಸಲಾದ ಒಂದು ಟೌನ್ ಪಂಚಾಯಿತಿ.][1]

1. 1995ರ ಅಧಿನಿಯಮ ಸಂಖ್ಯೆ: 13ರ ಮೂಲಕ ದಿನಾಂಕ:03.05.1995 ರಿಂದ ಸೇರಿಸಲಾಗಿದೆ.

**3. ಪಕ್ಷಾಂತರ ಆಧಾರದ ಮೇಲೆ ಅನರ್ಹತೆ.-** (1)[1][3ಎ, 3ಬಿ ಮತ್ತು 4ನೇ ಪ್ರಕರಣಗಳ ಉಪಬಂಧಗಳಿಗೊಳಪಟ್ಟು][1], ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿದ ಒಬ್ಬ ಕೌನ್ಸಿಲರು ಅಥವಾ ಒಬ್ಬ ಸದಸ್ಯನು,-

(ಎ) ಅಂಥ ರಾಜಕೀಯ ಪಕ್ಷದ ತನ್ನ ಸದಸ್ಯತ್ವವನ್ನು ಅವನು ಸ್ವಇಚ್ಛೆಯಿಂದ ತ್ಯಜಿಸಿದರೆ; ಅಥವಾ

1[(ಬಿ) ಮುನಿಸಿಪಲ್ ಕಾರ್ಪೊರೇಷನ್, ಮುನಿಸಿಪಲ್ ಕೌನ್ಸಿಲ್, ಟೌನ್ ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಅಥವಾ ತಾಲ್ಲೂಕು ಪಂಚಾಯಿತಿಯ ಯಾವುದೇ ಸಭೆಯಲ್ಲಿ, ಅವನು ಯಾವ ರಾಜಕೀಯ ಪಕ್ಷಕ್ಕೆ ಸೇರಿರುವನೋ ಆ ರಾಜಕೀಯ ಪಕ್ಷದಿಂದ ಅಥವಾ ಈ ಬಗ್ಗೆ ಅದು ಪ್ರಾಧಿಕೃತಗೊಳಿಸಿದ ಯಾವೊಬ್ಬ ವ್ಯಕ್ತಿ ಅಥವಾ ಪ್ರಾಧಿಕಾರದಿಂದ ನೀಡಲಾದ ಯವುದೇ ನಿರ್ದೇಶನಕ್ಕೆ ವಿರುದ್ಧವಾಗಿ, ಅವನು ಅಂಥ ರಾಜಕೀಯ ಪಕ್ಷ, ವ್ಯಕ್ತಿ ಅಥವಾ ಪ್ರಾಧಿಕಾರದ ಪೂರ್ವಾನುಮತಿ ಪಡೆಯದೆ ಮತ ನೀಡಿದರೆ ಅಥವಾ ಮತ ನೀಡಲು ತಪ್ಪಿದರೆ ಅಥವಾ ಉದ್ದೇಶಪೂರ್ವಕವಾಗಿ ಸಭೆಗೆ ಗೈರು ಹಾಜರಾದರೆ ಮತ್ತು ಹಾಗೆ ಮತ ನೀಡಿದ ಅಥವಾ ಮತ ನೀಡಲು ತಪ್ಪಿದ ಅಥವಾ ಗೈರು ಹಾಜರಾದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಅಂಥ ರಾಜಕೀಯ ಪಕ್ಷ, ವ್ಯಕ್ತಿ ಅಥವಾ ಪ್ರಾಧಿಕಾರವು ಹಾಗೆ ಮತ ನೀಡಿರುವುದನ್ನು, ಮತ ನೀಡಲು ತಪ್ಪಿರುವುದನ್ನು ಅಥವಾ ಗೈರುಹಾಜರಾದುದನ್ನು ಮನ್ನಿಸದಿದ್ದರೆ]1,

- ಅಂಥ ಕೌನ್ಸಿಲರ್ ಅಥವಾ ಸದಸ್ಯನಾಗಿರಲು ಅನರ್ಹನಾಗಿರತಕ್ಕದ್ದು.

**ವಿವರಣೆ** .- ಈ ಉಪ-ಪ್ರಕರಣದ ಉದ್ದೇಶಕ್ಕಾಗಿ,-

(ಎ) ಕೌನ್ಸಿಲರ್ ಆಗಿ ಅಥವಾ ಸಂದರ್ಭಾನುಸಾರ, ಸದಸ್ಯನಾಗಿ ಚುನಾಯಿತನಾದ ಒಬ್ಬ ವ್ಯಕ್ತಿಯು, ಯಾವ ರಾಜಕೀಯ ಪಕ್ಷದಿಂದ ಅವನನ್ನು ಅಂಥ ಕೌನ್ಸಿಲರ್ ಅಥವಾ ಸದಸ್ಯ ಸ್ಥಾನದ ಚುನಾವಣೆಗೆ ಅಭ್ಯರ್ಥಿಯಾಗಿ ನಿಲ್ಲಸಲಾಗಿತ್ತೋ ಆ ರಾಜಕೀಯ ಪಕ್ಷ, ಯಾವುದಾದರೂ ಇದ್ದರೆ, ಅದಕ್ಕೆ ಸೇರಿದವನೆಂದು ಭಾವಿಸತಕ್ಕದ್ದು;

1[(ಬಿ) ಒಂದು ರಾಜಕೀಯ ಪಕ್ಷದಿಂದ ನಿಲ್ಲಿಸಲಾದ ಒಬ್ಬ ಅಭ್ಯರ್ಥಿಯಾಗಿರದೆ ಅನ್ಯಥಾ ಒಬ್ಬ ಕೌನ್ಸಿಲರನಾಗಿ ಅಥವಾ ಸಂದರ್ಭಾನುಸಾರ ಒಬ್ಬ ಸದಸ್ಯನಾಗಿ ಚುನಾಯಿತನಾದ ಒಬ್ಬ ವ್ಯಕ್ತಿಯು, ಅವನ ಪದಾವಧಿಯು ಪ್ರಾರಂಭವಾದ ದಿನಾಂಕದಿಂದ ಆರು ತಿಂಗಳು ಮುಕ್ತಾಯವಾಗುವುದಕ್ಕೆ ಮುಂಚೆ, ಅಥವಾ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) (ತಿದ್ದುಪಡಿ) ಅಧಿನಿಯಮ, 1995 ಪ್ರಾರಂಭವಾಗುವ ದಿನಾಂಕದಂದು ಅಥವಾ ಅದಕ್ಕೆ ಮುಂಚೆ ಪದಾವಧಿಯು ಪ್ರಾರಂಭವಾಗಿರುವ ಕೌನ್ಸಿಲರ್ ಅಥವಾ ಸದಸ್ಯನ ಸಂದರ್ಭದಲ್ಲಿ, ಅಂಥ ದಿನಾಂಕದಿಂದ ಆರು ತಿಂಗಳೊಗಾಗಿ ಅವನು ಯಾವ ರಾಜಕೀಯ ಪಕ್ಷದ ಸದಸ್ಯನಾಗುವನೋ ಆ ರಾಜಕೀಯ ಪಕ್ಷಕ್ಕೆ ಸೇರಿದವನೆಂದು ಭಾವಿಸತಕ್ಕದ್ದು.]1

1. 1995ರ ಅಧಿನಿಯಮ ಸಂಖ್ಯೆ: 13ರ ಮೂಲಕ ದಿನಾಂಕ: 03.05.1995 ರಿಂದ ಪ್ರತಿಯೋಜಿಸಲಾಗಿದೆ.

(2) ಸಂದರ್ಭಾನುಸಾರ, ಒಬ್ಬ ಚುನಾಯಿತ ಕೌನ್ಸಿಲರ್ ಅಥವಾ ಒಬ್ಬ ಸದಸ್ಯನು ಒಂದು ರಾಜಕೀಯ ಪಕ್ಷದಿಂದ ನಿಲ್ಲಿಸಿದ ಅಭ್ಯರ್ಥಿಯಾಗಿ ಅಲ್ಲದೆ ಅನ್ಯಥಾ ಚುನಾಯಿತನಾಗಿದ್ದು 1[ಅವನ ಪದಾವಧಿಯು ಪ್ರಾರಂಭವಾದ ದಿನಾಂಕದಿಂದ ಆರು ತಿಂಗಳು ಮುಕ್ತಾಯವಾದ ತರುವಾಯ ಅಥವಾ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರಷೇಧ) (ತಿದ್ದುಪಡಿ) ಅಧಿನಿಯಮ, 1995ರ ಪ್ರಾರಂಭದ ದಿನಾಂಕದಂದು ಅಥವಾ ಅದಕ್ಕೆ ಮುಂಚೆ ಪದಾವಧಿಯು ಪ್ರಾರಂಭವಾಗಿರುವ ಕೌನ್ಸಿಲರನ ಅಥವಾ ಸದಸ್ಯನ ಸಂದರ್ಭದಲ್ಲಿ, ಅಂಥ ದಿನಾಂಕದಿಂದ ಆರು ತಿಂಗಳು ಮುಕ್ತಾಯವಾದ ತರುವಾಯ]1 ಒಂದು ರಾಜಕೀಯ ಪಕ್ಷವನ್ನು ಸೇರಿದರೆ, ಸಂದರ್ಭಾನುಸಾರ, ಒಬ್ಬ ಕೌನ್ಸಿಲರ್ ಅಥವಾ ಸದಸ್ಯನಾಗಿ ಇರುವುದಕ್ಕೆ ಅನರ್ಹನಾಗತಕ್ಕದ್ದು.

1. 1995ರ ಅಧಿನಿಯಮ ಸಂಖ್ಯೆ: 13ರ ಮೂಲಕ ದಿನಾಂಕ: 03.05.1995 ರಿಂದ ಪ್ರತಿಯೋಜಿಸಲಾಗಿದೆ.

1[(3) x x x ]1

1. 1995ರ ಅಧಿನಿಯಮ ಸಂಖ್ಯೆ: 13ರ ಮೂಲಕ ದಿನಾಂಕ: 03.05.1995 ರಿಂದ ಬಿಟ್ಟುಬಿಡಲಾಗಿದೆ.

(4) ಈ ಪ್ರಕರಣದ ಪೂರ್ವೋಕ್ತ ಉಪಬಂಧಗಳಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮವು ಪ್ರಾರಂಭವಾದಾಗ ಕೌನ್ಸಿಲರನಾಗಿರುವ ಒಬ್ಬ ವ್ಯಕ್ತಿಯು,-

(ಎ) ಅಂಥ ಪ್ರಾರಂಭದ ನಿಕಟಪೂರ್ವದಲ್ಲಿ ಒಂದು ರಾಜಕೀಯ ಪಕ್ಷದ ಸದಸ್ಯನಾಗಿದ್ದಲ್ಲಿ, ಅವನು ಒಬ್ಬ ಕೌನ್ಸಿಲರ್ ಆಗಿ ಚುನಾಯಿತನಾಗಿರುವುದು ಅಂಥ ರಾಜಕೀಯ ಪಕ್ಷದಿಂದ ನಿಲ್ಲಿಸಲಾದ ಒಬ್ಬ ಅಭ್ಯರ್ಥಿಯಾಗಿ ಎಂದು, (1)ನೇ ಉಪ-ಪ್ರಕರಣದ ಉದ್ದೇಶಗಳಿಗಾಗಿ, ಭಾವಿಸತಕ್ಕದ್ದು,

(ಬಿ) ಇತರ ಯಾವುದೇ ಸಂದರ್ಭದಲ್ಲಿ, ಅವನು ಯಾವುದೇ ರಾಜಕೀಯ ಪಕ್ಷದಿಂದ ನಿಲ್ಲಿಸಿದ ಅಭ್ಯರ್ಥಿಯಾಗಿ ಅಲ್ಲದೆ ಅನ್ಯಥಾ ಚುನಾಯಿತನಾಗಿರುವ ಒಬ್ಬ ಚುನಾಯಿತ ಕೌನ್ಸಿಲರ್ ಆಗಿರುವನೆಂದು (2)ನೇ ಉಪ-ಪ್ರಕರಣದ ಉದ್ದೇಶಕ್ಕಾಗಿ ಭಾವಿಸತಕ್ಕದ್ದು.

1[**3ಎ. ಪಕ್ಷಾಂತರದ ಕಾರಣದಿಂದ ಉಂಟಾಗುವ ಅನರ್ಹತೆಯು ಪಕ್ಷವು ಒಡೆದ ಸಂದರ್ಭದಲ್ಲಿ ಅನ್ವಯವಾಗಬಾರದು.**- ಕೌನ್ಸಿಲರ್ ಅಥವಾ ಸದಸ್ಯನು ತಾನು ಮತ್ತು ತನ್ನ ರಾಜಕೀಯ ಪಕ್ಷದ ಯಾರೇ ಇತರ ಸದಸ್ಯನು, ತನ್ನ ರಾಜಕೀಯ ಪಕ್ಷವು ಒಡೆದ ಕಾರಣದಿಂದಾಗಿ ಉಂಟಾದ ಬಣವನ್ನು ಪ್ರತಿನಿಧಿಸುವ ಗುಂಪನ್ನು ರಚಿಸುವುದಾಗಿ ಮತ್ತು ಅಂಥ ಗುಂಪು ಅಂಥ ರಾಜಕೀಯ ಪಕ್ಷದ ಸದಸ್ಯರ ಮೂರನೇ ಒಂದು ಭಾಗಕ್ಕಿಂತ ಕಡಿಮೆಯಿಲ್ಲದ ಸದಸ್ಯರನ್ನು ಒಳಗೊಳ್ಳುವುದೆಂದು ಕ್ಲೇಮು ಮಾಡಿದಲ್ಲಿ,-

(ಎ) ಅವನನ್ನು 3ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಡಿಯಲ್ಲಿ,-

(i) ಅವನು ತನ್ನ ರಾಜಕೀಯ ಪಕ್ಷದ ತನ್ನ ಸದಸ್ಯತ್ವವನ್ನು ಸ್ವಇಚ್ಛೆಯಿಂದ ಬಿಟ್ಟುಕೊಟ್ಟಿದ್ದಾನೆ ; ಅಥವಾ

(ii) ಅವನು ಮುನಿಸಿಪಲ್ ಕಾರ್ಪೊರೇಷನ್, ಮುನಿಸಿಪಲ್ ಕೌನ್ಸಿಲ್, ಟೌನ್ ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಅಥವಾ ತಾಲ್ಲೂಕು ಪಂಚಾಯಿತಿಯ ಯಾವುದೇ ಸಭೆಯಲ್ಲಿ ತಾನು ಯಾವ ರಾಜಕೀಯ ಪಕ್ಷಕ್ಕೆ ಸೇರಿರುವನೋ ಆ ರಾಜಕೀಯ ಪಕ್ಷ ಅಥವಾ ಆ ಸಂಬಂಧವಾಗಿ ಪ್ರಾಧಿಕೃತನಾದ ಯಾವೊಬ್ಬ ವ್ಯಕ್ತಿ ಅಥವಾ ಪ್ರಾಧಿಕಾರವು ಜಾರಿ ಮಾಡಿದ ಯಾವುದೇ ನಿರ್ದೇಶನಕ್ಕೆ ವಿರುದ್ಧವಾಗಿ, ಯಾವುದೇ ಸಂದರ್ಭದಲ್ಲಿ ಅಂಥ ರಾಜಕೀಯ ಪಕ್ಷ, ವ್ಯಕ್ತಿ ಅಥವಾ ಪ್ರಾಧಿಕಾರದ ಪೂರ್ವಾನುಮತಿ ಪಡೆಯದೆ ಮತ ನೀಡಿದ್ದಾನೆ ಅಥವಾ ಮತ ನೀಡಲು ತಪ್ಪಿದ್ದಾನೆ ಅಥವಾ ಉದ್ದೇಶಪೂರ್ವಕವಾಗಿ ಸಭೆಗೆ ಗೈರುಹಾಜರಾಗಿದ್ದಾನೆ ಮತ್ತು ಹಾಗೆ ಮತ ನೀಡುವುದು ಅಥವಾ ಮತ ನೀಡುವುದಕ್ಕೆ

ತಪ್ಪಿರುವುದು ಅಥವಾ ಹಾಗೆ ಗೈರು ಹಾಜರಾಗಿರುವುದನ್ನು ಅಂಥ ರಾಜಕೀಯ ಪಕ್ಷ, ವ್ಯಕ್ತಿ ಅಥವಾ ಪ್ರಾಧಿಕಾರವು ಹಾಗೆ ಮತ ನೀಡಿದ ಅಥವಾ ಮತ ನೀಡಲು ತಪ್ಪಿದ ಅಥವಾ ಗೈರು ಹಾಜರಾದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಮನ್ನಿಸಿಲ್ಲ ಎಂಬ ಕಾರಣಗಳ ಮೇಲೆ ಅನರ್ಹಗೊಳಿಸತಕ್ಕದ್ದಲ್ಲ.

(ಬಿ) ಹಾಗೆ ಪಕ್ಷವು ಒಡೆದಂದಿನಿಂದ, ಅಂಥ ಬಣವನ್ನು 3ನೇ ಪ್ರಕರಣದ (1)ನೇ ಉಪ-ಪ್ರಕರಣದ ಉದ್ದೇಶಗಳಿಗಾಗಿ ಯಾವ ರಾಜಕೀಯ ಪಕ್ಷಕ್ಕೆ ಅವನು ಸೇರಿರುವನೋ ಆ ರಾಜಕೀಯ ಪಕ್ಷವೆಂದು ಮತ್ತು ಈ ಪ್ರಕರಣದ ಉದ್ದೇಶಕ್ಕಾಗಿ ಅದು ಅವನ ರಾಜಕೀಯ ಪಕ್ಷವೆಂದು ಭಾವಿಸತಕ್ಕದ್ದು.

**3ಬಿ. ಪಕ್ಷಾಂತರ ಕಾರಣದಿಂದಾಗಿ ಉಂಟಾಗುವ ಅನರ್ಹತೆಯು ವಿಲೀನತೆಯ ಸಂದರ್ಭದಲ್ಲಿ ಅನ್ವಯವಾಗಬಾರದು** :- (1) ಒಬ್ಬ ಕೌನ್ಸಿಲರ್ ಅಥವಾ ಸದಸ್ಯನು, ಅವನ ರಾಜಕೀಯ ಪಕ್ಷವು ಮತ್ತೊಂದು ರಾಜಕೀಯ ಪಕ್ಷದೊಡನೆ ವಿಲೀನವಾದಲ್ಲಿ ಮತ್ತು ಅವನು ತಾನು ಮತ್ತು ತನ್ನ ರಾಜಕೀಯ ಪಕ್ಷದ ಯಾರೇ ಇತರ ಸದಸ್ಯರು,-

(ಎ) ಅಂಥ ಇತರ ರಾಜಕೀಯ ಪಕ್ಷ ಅಥವಾ ಸಂದರ್ಭಾನುಸಾರ ಅಂಥ ವಿಲೀನತೆಯಿಂದ ರೂಪುಗೊಂಡ ಹೊಸ ರಾಜಕೀಯ ಪಕ್ಷದ ಸದಸ್ಯರುಗಳಾಗಿದ್ದೇವೆಂದು; ಅಥವಾ

(ಬಿ) ವಿಲೀನತೆಯನ್ನು ಒಪ್ಪಿಕೊಳ್ಳದೆ ಮತ್ತು ಪ್ರತ್ಯೇಕ ಗುಂಪಾಗಿ ಕಾರ್ಯ ನಿರ್ವಹಿಸುವ ಆಯ್ಕೆಯನ್ನು ಮಾಡಿಕೊಂಡಿದ್ದೇವೆಂದು ಕ್ಲೇಮು ಮಾಡಿದರೆ, ಅವನು 3ನೇ ಪ್ರಕರಣದ (1)ನೇ ಉಪ-ಪ್ರಕರಣದಡಿ ಅನರ್ಹನಾಗತಕ್ಕದ್ದಲ್ಲ ಮತ್ತು ಹಾಗೆ ವಿಲೀನಗೊಂಡಂದಿನಿಂದ, ಅಂಥ ಇತರ ರಾಜಕೀಯ ಪಕ್ಷ ಅಥವಾ ಸಂದರ್ಭಾನುಸಾರ ಹೊಸ ರಾಜಕೀಯ ಪಕ್ಷ ಅಥವಾ ಗುಂಪನ್ನು, 3ನೇ ಪ್ರಕರಣದ (1)ನೇ ಉಪ-ಪ್ರಕರಣದ ಉದ್ದೇಶಗಳಿಗಾಗಿ ಅವನು ಯಾವ ರಾಜಕೀಯ ಪಕ್ಷಕ್ಕೆ ಸೇರಿರುವನೋ ಆ ರಾಜಕೀಯ ಪಕ್ಷವೆಂದು ಮತ್ತು ಈ ಪ್ರಕರಣದ ಉದ್ದೇಶಗಳಿಗಾಗಿ ಅವನ ರಾಜಕೀಯ ಪಕ್ಷವೆಂದು ಭಾವಿಸಿತಕ್ಕದ್ದು.

(2) ಈ ಪ್ರಕರಣದ (1)ನೇ ಉಪ-ಪ್ರಕರಣದ ಉದ್ದೇಶಗಳಿಗಾಗಿ,-

(ಎ) ಕೌನ್ಸಿಲರ್ ಅಥವಾ ಸದಸ್ಯನ ರಾಜಕೀಯ ಪಕ್ಷದ ವಿಲೀನತೆಯು, ಸಂಬಂಧಪಟ್ಟ ರಾಜಕೀಯ ಪಕ್ಷದ ಸದಸ್ಯರುಗಳ ಮೂರನೇ ಎರಡಕ್ಕೆ ಕಡಿಮೆಯಿಲ್ಲದಷ್ಟು ಸದಸ್ಯರು ಅಂಥ ವಿಲೀನತೆಯನ್ನು ಒಪ್ಪಿದರೆ ಮತ್ತು ಒಪ್ಪಿದರೆ ಮಾತ್ರವೇ ಉಂಟಾಗಿದೆಯೆಂದು ಭಾವಿಸತಕ್ಕದ್ದು.

(ಬಿ) "ಅಂಥ ಇತರ ರಾಜಕೀಯ ಪಕ್ಷ" ಮತ್ತು " ಹೊಸ ರಾಜಕೀಯ ಪಕ್ಷ" ಎಂಬ ಅಭಿವ್ಯಕ್ತಿಗಳು ಒಂದು ರಾಜಕೀಯ ಪಕ್ಷವನ್ನು, ಅಂಥ ರಾಜಕೀಯ ಪಕ್ಷಕ್ಕೆ ಚುನಾವಣಾ ಚಿಹ್ನೆಗಳ (ಮೀಸಲಾತಿ ಮತ್ತು ಹಂಚಿಕೆ) ಆದೇಶ, 1968ರ ಅಡಿಯಲ್ಲಿ ಒಂದು ರಾಷ್ಟ್ರೀಯ ಪಕ್ಷವೆಂದು ಅಥವಾ ಕರ್ನಾಟಕ ರಾಜ್ಯದಲ್ಲಿನ ಒಂದು ರಾಜ್ಯ ಪಕ್ಷವೆಂದು ಭಾರತದ ಚುನಾವಣಾ ಆಯೋಗವು ಮನ್ನಣೆ ನೀಡಿರಲಿ ಅಥವಾ ಇಲ್ಲದಿರಲಿ, ಒಳಗೊಳ್ಳತಕ್ಕದ್ದು.]1

1. ಉಪ-ಪ್ರಕರಣ (3ಎ) ಮತ್ತು (3ಬಿ)ಗಳನ್ನು 1995ರ ಅಧಿನಿಯಮ ಸಂಖ್ಯೆ: 13ರ ಮೂಲಕ ದಿನಾಂಕ: 03.05.1995 ರಿಂದ ಸೇರಿಸಲಾಗಿದೆ.

**4. ಪಕ್ಷಾಂತರದ ಆಧಾರದ ಮೆಲೆ ಅನರ್ಹತೆಗೆ ಸಂಬಂಧಪಟ್ಟ ಪ್ರಶ್ನೆಯ ಬಗ್ಗೆ ತೀರ್ಮಾನ.**- (1) ಒಬ್ಬ ಸದಸ್ಯ ಅಥವಾ ಕೌನ್ಸಿಲರು 3ನೇ ಪ್ರಕರಣದ ಅಡಿಯಲ್ಲಿ ಅನರ್ಹತೆಗೊಳಗಾಗಿರುವನೆಂಬ ಒಂದು ದೂರನ್ನು,-

(ಎ) (1)ನೇ ಉಪ-ಪ್ರಕರಣದ (ಎ) ಖಂಡದ ಅಡಿಯಲ್ಲಿ ಬರುವಂಥ ಸಂದರ್ಭದಲ್ಲಿ, ಆ ಸದಸ್ಯ ಅಥವಾ ಕೌನ್ಸಿಲರು, ರಾಜಕೀಯ ಪಕ್ಷದ ಸದಸ್ಯತ್ವವನ್ನು ತ್ಯಜಿಸಿದ ತರುವಾಯ ;

(ಬಿ) (1)ನೇ ಉಪ-ಪ್ರಕರಣದ (ಬಿ) ಖಂಡದ ಅಡಿಯಲ್ಲಿ ಬರುವಂಥ ಸಂದರ್ಭದಲ್ಲಿ, ಅದರಲ್ಲಿ ನಿರ್ದಿಷ್ಟಪಡಿಸಲಾದ ಹದಿನೈದು ದಿನಗಳ ಮುಕ್ತಾಯದ ತರುವಾಯ ;

(ಸಿ) (2)ನೇ ಉಪ-ಪ್ರಕರಣದ ಅಡಿಯಲ್ಲಿ ಬರುವಂಥ ಸಂದರ್ಭದಲ್ಲಿ, ಅವನು ರಾಜಕೀಯ ಪಕ್ಷಕ್ಕೆ ಸೇರಿದ ತರುವಾಯ;

(ಡಿ) 1[x x x ]1

- ಯಾವೊಬ್ಬ ಸದಸ್ಯ , ಕೌನ್ಸಿಲರು ಅಥವಾ ರಾಜಕೀಯ ಪಕ್ಷವು, ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗೆ ನೀಡಬಹುದು.

1. 1995ರ ಅಧಿನಿಯಮ ಸಂಖ್ಯೆ: 13ರ ಮೂಲಕ ದಿನಾಂಕ: 03.05.1995 ರಿಂದ ಬಿಟ್ಟುಬಿಡಲಾಗಿದೆ.

(2) ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಹಣಾಧಿಕಾರಿಯು (1)ನೇ ಉಪ-ಪ್ರಕರಣದ ಅಡಿಯಲ್ಲಿ ಒಂದು ದೂರನ್ನು ಸ್ವೀಕರಿಸಿರುವಲ್ಲಿ, ಅಂಥ ದೂರನ್ನು ಸ್ವೀಕರಿಸಲಾದ ಇಪ್ಪತ್ತನಾಲ್ಕು ಗಂಟೆಗಳೊಳಗಾಗಿ, ಅದನ್ನು, ತೀರ್ಮಾನಕ್ಕಾಗಿ,-

1["(i) ಜಿಲ್ಲಾ ಪಂಚಾಯಿತಿಯ ಸಂದರ್ಭದಲ್ಲಿ, ರಾಜ್ಯ ಚುನಾವಣಾ ಕಮಿಷನರ್‌ಗೆ]1,

(ii) ಮುನಿಸಿಪಲ್ ಕಾರ್ಪೋರೇಷನ್ನಿನ ಸಂದರ್ಭದಲ್ಲಿ, 5[ಪ್ರಾದೇಶಿಕ ಕಮೀಷನರಿಗೆ] 5;

(iii) ನಗರ ಅಥವಾ ಪಟ್ಟಣ ಮುನಿಸಿಪಲ್ ಕೌನ್ಸಿಲ್ಲಿನ 2[ಅಥವಾ ಟೌನ್ ಪಂಚಾಯಿತಿಯ]2 ಸಂದರ್ಭದಲ್ಲಿ, ಡೆಪ್ಯುಟಿ ಕಮಿಾಷನರಿಗೆ;

1[(iv) ತಾಲ್ಲೂಕು ಪಂಚಾಯಿತಿಯ ಸಂದರ್ಭದಲ್ಲಿ, ರಾಜ್ಯ ಚುನಾವಣಾ ಕಮಿಷನರ್‌ಗೆ]1

- ಕಳುಹಿಸತಕ್ಕದ್ದು ಮತ್ತು ಕಳುಹಿಸಲಾದುದನ್ನು ಸ್ವೀಕರಿಸಿದ 6[3[ಅರವತ್ತು ದಿನಗಳೊಳಗಾಗಿ]3]6 ಪ್ರಶ್ನೆಯನ್ನು ಅವರು ತೀರ್ಮಾನಿಸತಕ್ಕದ್ದು ಮತ್ತು ಅವರ ತೀರ್ಮಾನವು ಅಂತಿಮವಾಗಿರತಕ್ಕದ್ದು.

4[ ಪರಂತುಕ x x x ]4

1. 1995ರ ಅಧಿನಿಯಮ ಸಂಖ್ಯೆ: 19ರ ಮೂಲಕ ದಿನಾಂಕ: 05.06.1995 ರಿಂದ ಪ್ರತಿಯೋಜಿಸಲಾಗಿದೆ.
2. 1995ರ ಅಧಿನಿಯಮ ಸಂಖ್ಯೆ: 13ರ ಮೂಲಕ ದಿನಾಂಕ: 03.05.1995 ರಿಂದ ಸೇರಿಸಲಾಗಿದೆ.
3. 1995ರ ಅಧಿನಿಯಮ ಸಂಖ್ಯೆ: 13ರ ಮೂಲಕ ದಿನಾಂಕ: 03.05.1995 ರಿಂದ ಪ್ರತಿಯೋಜಿಸಲಾಗಿದೆ.
4. 1995ರ ಅಧಿನಿಯಮ ಸಂಖ್ಯೆ: 13ರ ಮೂಲಕ ಸೇರಿಸಲಾದ ಪರಂತುಕವನ್ನು 1995ರ ಅಧಿನಿಯಮ ಸಂಖ್ಯೆ:19ರ ಮೂಲಕ ದಿನಾಂಕ:05.06.1995 ರಿಂದ ಬಿಟ್ಟುಬಿಡಲಾಗಿದೆ.
5. 2010ರ ಅಧಿನಿಯಮ ಸಂಖ್ಯೆ: 17ರ ಮೂಲಕ ದಿನಾಂಕ: 16.04.2010 ರಿಂದ ಪ್ರತಿಯೋಜಿಸಲಾಗಿದೆ.
6. 2013ರ ಅಧಿನಿಯಮ ಸಂಖ್ಯೆ: 05ರ ಮೂಲಕ ದಿನಾಂಕ: 11.01.2013 ರಿಂದ ಪ್ರತಿಯೋಜಿಸಲಾಗಿದೆ.

**ವಿವರಣೆ.**- ಈ ಪ್ರಕರಣದಲ್ಲಿ,-

(1) "ಮುಖ್ಯ ಕಾರ್ಯನಿರ್ವಹಣಾಧಿಕಾರಿ" ಎಂದರೆ,-

1[(ಎ) ಜಿಲ್ಲಾ ಪಂಚಾಯಿತಿಯ ಸಂದರ್ಭದಲ್ಲಿ, ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ;

(ಬಿ) ತಾಲ್ಲೂಕು ಪಂಚಾಯಿತಿ ಸಂದರ್ಭದಲ್ಲಿ, ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಹಣಾಧಿಕಾರಿ ;]1

(ಸಿ) ಮುನಿಸಿಪಲ್ ಕಾರ್ಪೊರೇಷನ್ ಸಂದರ್ಭದಲ್ಲಿ ,ಆಯುಕ್ತರು;

(ಡಿ) ಸಿಟಿ ಮುನಿಸಿಪಲ್ ಕೌನ್ಸಿಲ್‌ನ ಸಂದರ್ಭದಲ್ಲಿ, ಮುನಿಸಿಪಲ್ ಕಮಿಾಷನರು;

(ಇ) ಟೌನ್ ಮುನಿಸಿಪಲ್ ಕೌನ್ಸಿಲ್‌ನ ಸಂದರ್ಭದಲ್ಲಿ, ಮುಖ್ಯ ಅಧಿಕಾರಿ;

2[(ಎಫ್) ಟೌನ್ ಪಂಚಾಯಿತಿಯ ಸಂದರ್ಭದಲ್ಲಿ , ಮುಖ್ಯ ಅಧಿಕಾರಿ]2

3[(2) "ಸ್ಥಳೀಯ ಪ್ರಾಧಿಕಾರ" ಎಂದರೆ, ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ, ಮುನಿಸಿಪಲ್ ಕಾರ್ಪೊರೇಷನ್, ನಗರ ಅಥವಾ ಟೌನ್ ಮುನಿಸಿಪಲ್ ಕೌನ್ಸಿಲ್ ಅಥವಾ ಟೌನ್ ಪಂಚಾಯಿತಿ]3

4[(3) "ರಾಜ್ಯ ಚುನಾವಣಾ ಕಮಿಷನರ್" ಎಂದರೆ, ಕರ್ನಾಟಕ ಪಂಚಾಯತ್ ರಾಜ್ಯ ಅಧಿನಿಯಮ, 1993ರ 308ನೇ ಪ್ರಕರಣದ ಅಡಿಯಲ್ಲಿ ನೇಮಕನಾದ ರಾಜ್ಯ ಚುನಾವಣಾ ಕಮಿಷನರ್.]4

1. 1995ರ ಅಧಿನಿಯಮ ಸಂಖ್ಯೆ: 13ರ ಮೂಲಕ ದಿನಾಂಕ: 03.05.1995 ರಿಂದ ಪ್ರತಿಯೋಜಿಸಲಾಗಿದೆ.
2. 1995ರ ಅಧಿನಿಯಮ ಸಂಖ್ಯೆ: 13ರ ಮೂಲಕ ದಿನಾಂಕ: 03.05.1995 ರಿಂದ ಸೇರಿಸಲಾಗಿದೆ.
3. 1995ರ ಅಧಿನಿಯಮ ಸಂಖ್ಯೆ: 13ರ ಮೂಲಕ ದಿನಾಂಕ: 03.05.1995 ರಿಂದ ಪ್ರತಿಯೋಜಿಸಲಾಗಿದೆ.
4. 1995ರ ಅಧಿನಿಯಮ ಸಂಖ್ಯೆ: 19ರ ಮೂಲಕ ದಿನಾಂಕ: 05.06.1995 ರಿಂದ ಸೇರಿಸಲಾಗಿದೆ.

**5. 1964ರ ಕರ್ನಾಟಕ ಅಧಿನಿಯಮ 22ಕ್ಕೆ ತಿದ್ದುಪಡಿ.–** ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22)ರಲ್ಲಿ 16ನೇ ಪ್ರಕರಣದ (1)ನೇ ಉಪ-ಪ್ರಕರಣದ ತರುವಾಯ, ಈ ಮುಂದಿನ ಉಪ-ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ :-

"(1A) A person shall be disqualified for being a Councillor if he is so disqualified under the Karnataka Local Authorities (Prohibition of Defection) Act, 1987."

**6. 1977ರ ಕರ್ನಾಟಕ ಅಧಿನಿಯಮ 14ಕ್ಕೆ ತಿದ್ದುಪಡಿ.–** ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ನುಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ರ 26ನೇ ಪ್ರಕರಣದ (1)ನೇ ಉಪ-ಪ್ರಕರಣದ ತರುವಾಯ, ಈ ಮುಂದಿನ ಉಪ-ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ :-

"(1A) A person shall be disqualified for being a Councillor if he is so disqualified under the Karnataka Local Authorities (Prohibition of Defection) Act, 1987."

**7. 1985ರ ಕರ್ನಾಟಕ ಅಧಿನಿಯಮ 20ಕ್ಕೆ ತಿದ್ದುಪಡಿ.–** ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿಗಳ ಅಧಿನಿಯಮ, 1983 (1985ರ ಕರ್ನಾಟಕ ಅಧಿನಿಯಮ 20) ರಲ್ಲಿ,-

(i) 11ನೇ ಪ್ರಕರಣದ (1)ನೇ ಉಪ-ಪ್ರಕರಣದ ತರುವಾಯ, ಈ ಮುಂದಿನ ಉಪ-ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ :-

"(1A) A person shall be disqualified for being a member of the Mandal panchayat if he is so disqualified under the Karnataka Local Authorities (Prohibition of Defection) Act, 1987."

(ii) 12ನೇ ಪ್ರಕರಣದ (1)ನೇ ಉಪ-ಪ್ರಕರಣದ (ಎ)ನೇ ಖಂಡದಲ್ಲಿ "section 11" ಎಂಬ ಪದಗಳು ಮತ್ತು ಅಂಕಿಗಳಿಗೆ, 'Sub-section (1) of section 11" ಎಂಬ ಪದಗಳು, ಆವರಣಗಳು ಮತ್ತು ಅಂಕಿಗಳನ್ನು ಪ್ರತಿಸ್ಥಾಪಿಸತಕ್ಕದ್ದು ;

(iii) 154ನೇ ಪ್ರಕರಣದ (1)ನೇ ಉಪ-ಪ್ರಕರಣದ ತರುವಾಯ, ಈ ಮುಂದಿನ ಉಪ-ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ :-

"(1A) A person shall be disqualified for being a member of the the Zilla Parishad if he is so disqalified under the Karnataka Local Authorities (Prohibition of Defection) Act, 1987."

(iv) 155ನೇ ಪ್ರಕರಣದ (1)ನೇ ಉಪ-ಪ್ರಕರಣದ (ಎ) ಖಂಡದಲ್ಲಿ "Section 154" ಎಂಬ ಪದಗಳು ಮತ್ತು ಅಂಕಿಗಳಿಗೆ, "sub-section (1) of section 154" ಎಂಬ ಪದಗಳು, ಆವರಣಗಳು ಮತ್ತು ಅಂಕಿಗಳನ್ನು ಪ್ರತಿಸ್ಥಾಪಿಸತಕ್ಕದ್ದು.

**8. ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯ ಮೇಲೆ ಪ್ರತಿಷೇಧ.–** ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಅಡಿಯಲ್ಲಿ ಕೌನ್ಸಿಲರ್ ಅಥವಾ ಸದಸ್ಯನ ಅನರ್ಹತೆಗೆ ಸಂಬಂಧಿಸಿದ ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ ಯಾವುದೇ ನ್ಯಾಯಾಲಯವು ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ.

**9. ನಿಯಮಗಳ ರಚನಾಧಿಕಾರ.–** (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವ ಸಲುವಾಗಿ, ಅಧಿಸೂಚನೆಯ ಮೂಲಕ ಮತ್ತು ಪೂರ್ವ ಪ್ರಕಟಣೆಯ ತರುವಾಯ, ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಲಾದ ತರುವಾಯ, ರಾಜ್ಯ ವಿಧಾನಮಂಡಲವು ಅಧಿವೇಶನದಲ್ಲಿದ್ದರೆ ಸಾಧ್ಯವಾದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಒಂದು ಅಧಿವೇಶನ ಅಥವಾ ಎರಡು ಅಥವಾ ಹೆಚ್ಚಿನ ಅನುಕ್ರಮ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಹಾಗೆ ಮಂಡಿಸಲಾದ ಅಧಿವೇಶನ ಅಥವಾ ನಿಕಟೋತ್ತರ ಅಧಿವೇಶನವು ಮುಕ್ತಾಯವಾಗುವ ಮೊದಲು ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಉಭಯ ಸದನಗಳು ಒಪ್ಪಿದರೆ ಅಥವಾ ನಿಯಮಗಳನ್ನು ರಚಿಸಬಾರದೆಂದು ಉಭಯ ಸದನಗಳು ಒಪ್ಪಿದರೆ ಮತ್ತು ಅಂಥ ತೀರ್ಮಾನವನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚಿಸಿದರೆ, ನಿಯಮವು ಅಂಥ ಅಧಿಸೂಚನೆಯ ಪ್ರಕಟಣೆಯ ದಿನಾಂಕದಿಂದ, ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಅಡಿಯಲ್ಲಿ ಹಿಂದೆ ಮಾಡಲಾದ ಅಥವಾ ಮಾಡದೇ ಬಿಟ್ಟುಬಿಡಲಾದ ಯಾವುದರ ಮಾನ್ಯತೆಗೂ ಪ್ರತಿಕೂಲವಾಗಿರತಕ್ಕದ್ದಲ್ಲ.

**10. ನಿರಸನ ಮತ್ತು ಉಳಿಸುವಿಕೆಗಳು.–** (1) ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) ಅಧ್ಯಾದೇಶ, 1986 (1986ರ ಕರ್ನಾಟಕ ಅಧ್ಯಾದೇಶ 18)ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸಿತವಾಗಿದ್ದರೂ, ಸದರಿ ಅಧ್ಯಾದೇಶದ ಅಡಿಯಲ್ಲಿ ಮಾಡಲಾದ ಯಾವುದೇ ಕಾರ್ಯ ಅಥವಾ ಕೈಗೊಳ್ಳಲಾದ ಯಾವುದೇ ಕೃತ್ಯವನ್ನು, ಈ ಅಧಿನಿಯಮದ ಅಡಿಯಲ್ಲಿ ಮಾಡಲಾದುದೆಂದು ಅಥವಾ ಕೈಗೊಳ್ಳಲಾದುದೆಂದು ಭಾವಿಸತಕ್ಕದ್ದು.

**2013ರ ಕರ್ನಾಟಕ ಅಧಿನಿಯಮ ಸಂಖ್ಯೆ 05**

**(2013ರ ಜನವರಿ ಹನ್ನೊಂದನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)**

**ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) (ತಿದ್ದುಪಡಿ) ಅಧಿನಿಯಮ 2012**

(2013ರ ಜನವರಿ ಹತ್ತನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) ಅಧಿನಿಯಮ, 1987ನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) ಅಧಿನಿಯಮ, 1987ನ್ನು (1987ರ ಕರ್ನಾಟಕ ಅಧಿನಿಯಮ 20) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತಮೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) (ತಿದ್ದುಪಡಿ) ಅಧಿನಿಯಮ, 2012 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 4ನೇ ಪ್ರಕರಣದ ತಿದ್ದುಪಡಿ.–** ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) ಅಧಿನಿಯಮ, 1987ರಲ್ಲಿ (1987ರ ಕರ್ನಾಟಕ ಅಧಿನಿಯಮ 20) 4ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ, "ಮೂವತ್ತು ದಿನಗಳೊಳಗಾಗಿ" ಎಂಬ ಪದಗಳಿಗೆ "ಅರವತ್ತು ದಿನಗಳೊಳಗಾಗಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

**ಜಿ.ಕೆ.ಬೋರೇಗೌಡ**

ಸರ್ಕಾರದ ಕಾರ್ಯದರ್ಶಿ

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ

* * * *